# ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ಅಧಿನಿಯಮ, 1992

(1992ರ 19)

**27.01.2007 ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 36ನೇ ಸಂಪುಟದ 1ನೇ ಸಂಚಿಕೆಯಲ್ಲಿ 45 ರಿಂದ 50ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ –I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ– II
### ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗ

3. ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗದ ರಚನೆ
4. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಹಾಗೂ ಸೇವಾ ಷರತ್ತುಗಳು
5. ಆಯೋಗದ ಅಧಿಕಾರಿಗಳು ಮತ್ತು ಇತರ ನೌಕರರು
6. ವೇತನಗಳು ಮತ್ತು ಭತ್ಯೆಗಳನ್ನು ಅನುದಾನದಿಂದ ಸಂದಾಯ ಮಾಡುವುದು
7. ಖಾಲಿ ಸ್ಥಾನಗಳು, ಇತ್ಯಾದಿಗಳು, ಆಯೋಗದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು
8. ಆಯೋಗವು ವಿನಿಯಮಿಸಬೇಕಾದ ಕಾರ್ಯವಿಧಾನ

### ಅಧ್ಯಾಯ–III
### ಆಯೋಗದ ಪ್ರಕಾರ್ಯಗಳು

9. ಆಯೋಗದ ಪ್ರಕಾರ್ಯಗಳು

### ಅಧ್ಯಾಯ –IV
### ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

10. ಕೇಂದ್ರ ಸರ್ಕಾರದಿಂದ ಅನುದಾನಗಳು
11. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ
12. ವಾರ್ಷಿಕ ವರದಿ
13. ವಾರ್ಷಿಕ ವರದಿಯನ್ನು ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು

### ಅಧ್ಯಾಯ –V
### ಸಂಕೀರ್ಣ

14. ಆಯೋಗದ ಅಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿ ವರ್ಗವು ಲೋಕ ನೌಕರರಾಗಿರುವುದು
15. ನಿಯಮ ರಚನಾಧಿಕಾರ
16. ತೊಂದರೆಗಳ ನಿವಾರಣೆಯ ಅಧಿಕಾರ

# ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ಅಧಿನಿಯಮ, 1992

## (1992ರ ಸಂಖ್ಯೆ 19)

(ಮಾರ್ಚ್ 17, 1992)

ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗವನ್ನು ರಚಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳನ್ನು ಉಪಬಂಧಿಸುವ ಒಂದು ಅಧಿನಿಯಮ.

ಇದು ಭಾರತ ಗಣರಾಜ್ಯದ ನಲವತ್ಮೂರನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಿದೆ:–

## ಅಧ್ಯಾಯ –I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗ ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದಿದ್ದರೆ,–

(ಎ) "ಆಯೋಗ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ;

(ಬಿ) "ಸದಸ್ಯ" ಎಂದರೆ ಆಯೋಗದ ಸದಸ್ಯ ಮತ್ತು ಇದರಲ್ಲಿ ಉಪಾಧ್ಯಕ್ಷನೂ ಒಳಗೊಳ್ಳುತ್ತಾನೆ;

(ಸಿ) ಈ ಅಧಿನಿಯಮದ ಉದ್ದೇಶಕ್ಕಾಗಿ "ಅಲ್ಪ ಸಂಖ್ಯಾತ" ಎಂದರೆ ಕೇಂದ್ರ ಸರ್ಕಾರದಿಂದ ಅಲ್ಪ ಸಂಖ್ಯಾತ ಎಂಬುದಾಗಿ ಅಧಿಸೂಚಿಸಲಾಗಿರುವಂಥ ಸಮುದಾಯ;

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

## ಅಧ್ಯಾಯ– II

## ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗ

**3. ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗದ ರಚನೆ.–** (1) ಕೇಂದ್ರ ಸರ್ಕಾರವು, ರಾಷ್ಟ್ರೀಯ ಅಲ್ಪ ಸಂಖ್ಯಾತರ ಆಯೋಗ ಎಂದು ಕರೆಯಲಾಗುವ ಮತ್ತು ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವ ಹಾಗೂ ವಹಿಸಿಕೊಡಲಾದ ಪ್ರಕಾರ್ಯಗಳನ್ನು ನಿರ್ವಹಿಸುವ ಒಂದು ನಿಕಾಯವನ್ನು ರಚಿಸತಕ್ಕದ್ದು.

(2) ಆಯೋಗವು, ಶ್ರೇಷ್ಠರಾದ, ಸಮರ್ಥರಾದ ಹಾಗೂ ನಿಷ್ಠಾವಂತರಾದ ವ್ಯಕ್ತಿಗಳ ಪೈಕಿಯಿಂದ ಕೇಂದ್ರ ಸರ್ಕಾರವು ನಾಮ ನಿರ್ದೇಶನ ಮಾಡಿದ ಒಬ್ಬ ಅಧ್ಯಕ್ಷ, ಒಬ್ಬ ಉಪಾಧ್ಯಕ್ಷ ಮತ್ತು ಐದು ಜನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು:

ಪರಂತು, ಅಧ್ಯಕ್ಷನೂ ಸೇರಿದಂತೆ ಐದು ಜನ ಸದಸ್ಯರು ಅಲ್ಪಸಂಖ್ಯಾತ ಸಮುದಾಯದವರಾಗಿರತಕ್ಕದ್ದು.

**4. ಅಧ್ಯಕ್ಷನ ಮತ್ತು ಸದಸ್ಯರ ಪದಾವಧಿ ಹಾಗೂ ಸೇವಾ ಷರತ್ತುಗಳು.–** (1) ಅಧ್ಯಕ್ಷನು ಮತ್ತು ಪ್ರತಿಯೊಬ್ಬ ಸದಸ್ಯನು, ತಮ್ಮ ತಮ್ಮ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡಿರತಕ್ಕದ್ದು.

(2) ಅಧ್ಯಕ್ಷನು ಅಥವಾ ಸದಸ್ಯನು, ತಾನೇ ಬರೆದು ಸಹಿ ಮಾಡಿದ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಯಾವುದೇ ಸಮಯದಲ್ಲಿ ಅಧ್ಯಕ್ಷ ಪದಕ್ಕೆ ಅಥವಾ ಸಂದರ್ಭಾನುಸಾರ ಸದಸ್ಯ ಪದಕ್ಕೆ ರಾಜೀನಾಮೆ ನೀಡಬಹುದು.

(3) ಕೇಂದ್ರ ಸರ್ಕಾರವು, ಒಬ್ಬ ವ್ಯಕ್ತಿಯನ್ನು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಧ್ಯಕ್ಷನ ಅಥವಾ ಸದಸ್ಯನ ಪದದಿಂದ ಈ ಮುಂದಿನ ಸಂದರ್ಭಗಳಲ್ಲಿ,–

(ಎ) ಆ ವ್ಯಕ್ತಿಯು ಅವಿಮುಕ್ತ ದಿವಾಳಿಯಾಗಿದರೆ;

(ಬಿ) ಆ ವ್ಯಕ್ತಿಯು ಕೇಂದ್ರ ಸರ್ಕಾರದ ದೃಷ್ಟಿಯಲ್ಲಿ ನೈತಿಕ ಅಧ:ಪತನವನ್ನೊಳಗೊಂಡ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದರೆ ಮತ್ತು ಕಾರಾವಾಸ ಶಿಕ್ಷೆಗೆ ಗುರಿಯಾದರೆ;

(ಸಿ) ಆ ವ್ಯಕ್ತಿಯು ಅಸ್ವಸ್ಥಚಿತ್ತನಾದರೆ ಮತ್ತು ಒಂದು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದರೆ;

(ಡಿ) ಆ ವ್ಯಕ್ತಿಯು ಕರ್ತವ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಕರ್ತವ್ಯ ನಿರ್ವಹಿಸಲು ಅಸಮರ್ಥನಾದರೆ;

(ಇ) ಆ ವ್ಯಕ್ತಿಯು ಆಯೋಗದಿಂದ ಗೈರು ಹಾಜರಿಗೆ ಅನುಮತಿ ಪಡೆಯದೆ ಆಯೋಗದ ಮೂರು ನಿರಂತರ ಸಭೆಗಳಿಗೆ ಗೈರು ಹಾಜರಾದರೆ; ಅಥವಾ

(ಎಫ್) ಆ ವ್ಯಕ್ತಿಯು ಅಧ್ಯಕ್ಷನ ಅಥವಾ ಸದಸ್ಯನ ಪದದಲ್ಲಿ ಮುಂದುವರಿಯುವುದರಿಂದ ಅಲ್ಪ ಸಂಖ್ಯಾತರ ಹಿತಾಸಕ್ತಿಗೆ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಹಾನಿಯುಂಟಾಗುವ ರೀತಿಯಲ್ಲಿ ತನ್ನ ಪದವನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ:

– ಪದದಿಂದ ತೆಗೆದುಹಾಕಬಹುದು:

ಪರಂತು, ಆ ಯಾರೇ ವ್ಯಕ್ತಿಗೆ, ಈ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ಹೊರತು, ಈ ಖಂಡದ ಮೇರೆಗೆ ಅವನನ್ನು ತೆಗೆದುಹಾಕತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ ಮೇರೆಗೆ ಅಥವಾ ಇತರ ರೀತಿಯಲ್ಲಿ ತೆರವಾದ ಸ್ಥಾನವನ್ನು ಹೊಸ ನಾಮನಿರ್ದೇಶನದ ಮೂಲಕ ಭರ್ತಿ ಮಾಡತಕ್ಕದ್ದು.

(5) ಅಧ್ಯಕ್ಷನಿಗೆ ಮತ್ತು ಸದಸ್ಯನಿಗೆ ಸಂದಾಯ ಮಾಡಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**5. ಆಯೋಗದ ಅಧಿಕಾರಿಗಳು ಮತ್ತು ಇತರ ನೌಕರರು.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಆಯೋಗದ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವುದಕ್ಕಾಗಿ ಅಗತ್ಯವಿರಬಹುದಾದಂಥ ಒಬ್ಬ ಕಾರ್ಯದರ್ಶಿಯನ್ನು ಮತ್ತು ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ಆಯೋಗಕ್ಕೆ ಒದಗಿಸತಕ್ಕದ್ದು.

(2) ಆಯೋಗದ ಉದ್ದೇಶಕ್ಕಾಗಿ ನೇಮಕಗೊಂಡ ಅಧಿಕಾರಿಗಳು ಮತ್ತು ಇತರ ನೌಕರರಿಗೆ ಸಂದಾಯ ಮಾಡಬೇಕಾದ ವೇತನ ಮತ್ತು ಭತ್ಯೆಗಳು ಹಾಗೂ ಅವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**6. ವೇತನಗಳು ಮತ್ತು ಭತ್ಯೆಗಳನ್ನು ಅನುದಾನದಿಂದ ಸಂದಾಯ ಮಾಡುವುದು.–** ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನ ಮತ್ತು ಭತ್ಯೆಗಳನ್ನು ಮತ್ತು 5ನೆಯ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನಗಳನ್ನು ಒಳಗೊಂಡ ಆಡಳಿತಾತ್ಮಕ ವೆಚ್ಚಗಳನ್ನು 10ನೆಯ ಪ್ರಕರಣದ (1)ನೆಯ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅನುದಾನಗಳಿಂದ ಸಂದಾಯ ಮಾಡತಕ್ಕದ್ದು.

**7. ಖಾಲಿ ಸ್ಥಾನಗಳು, ಇತ್ಯಾದಿಗಳು, ಆಯೋಗದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.–** ಆಯೋಗದಲ್ಲಿ ಯಾವುದೇ ಸ್ಥಾನವು ಖಾಲಿಯಿದೆಯೆಂಬ ಅಥವಾ ಆಯೋಗದ ರಚನೆಯಲ್ಲಿ ದೋಷವಿದೆಯೆಂಬ ಕಾರಣ ಮಾತ್ರದಿಂದ ಆಯೋಗದ ಯಾವುದೇ ಕೃತ್ಯವನ್ನು ಅಥವಾ ವ್ಯವಹರಣೆಯನ್ನು ಪ್ರಶ್ನಿಸತಕ್ಕದ್ದಲ್ಲ ಅಥವಾ ಅದನ್ನು ಅಸಿಂಧುಗೊಳಿಸತಕ್ಕದ್ದಲ್ಲ.

**8. ಆಯೋಗವು ವಿನಿಯಮಿಸಬೇಕಾದ ಕಾರ್ಯ ವಿಧಾನ.–** (1) ಆಯೋಗವು, ಅಗತ್ಯವಿದ್ದಾಗಲೆಲ್ಲ ಅಧ್ಯಕ್ಷನು ಸೂಕ್ತವೆಂದು ಯೋಚಿಸುವಂಥ ಸಮಯ ಮತ್ತು ಸ್ಥಳದಲ್ಲಿ ಸಭೆ ಸೇರಿಸತಕ್ಕದ್ದು.

(2) ಆಯೋಗವು ತನ್ನದೇ ಆದ ಕಾರ್ಯ ವಿಧಾನವನ್ನು ವಿನಿಯಮಿಸತಕ್ಕದ್ದು.

(3) ಆಯೋಗದ ಕಾರ್ಯದರ್ಶಿಯು ಅಥವಾ ಈ ಕುರಿತು ಕಾರ್ಯದರ್ಶಿಯು ಅಧಿಕಾರ ನೀಡಿದ ಇತರ ಯಾರೇ ಅಧಿಕಾರಿಯು ಆಯೋಗದ ಎಲ್ಲ ಅದೇಶಗಳನ್ನು ಮತ್ತು ನಿರ್ಣಯಗಳನ್ನು ಅಧಿಪ್ರಮಾಣಿಸತಕ್ಕದ್ದು.

## ಅಧ್ಯಾಯ–III

## ಆಯೋಗದ ಪ್ರಕಾರ್ಯಗಳು

**9. ಆಯೋಗದ ಪ್ರಕಾರ್ಯಗಳು.–** (1) ಆಯೋಗವು, ಈ ಕೆಳಕಂಡ ಎಲ್ಲ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಅವುಗಳೆಂದರೆ:–

(ಎ) ಕೇಂದ್ರ ಮತ್ತು ರಾಜ್ಯಗಳಲ್ಲಿ ಅಲ್ಪ ಸಂಖ್ಯಾತರ ಅಭಿವೃದ್ಧಿಯ ಪ್ರಗತಿಯ ಮೌಲ್ಯ ಮಾಪನ ಮಾಡುವುದು;

(ಬಿ) ಸಂವಿಧಾನದಲ್ಲಿ ಮತ್ತು ಸಂಸತ್ತು ಹಾಗೂ ರಾಜ್ಯ ವಿಧಾನ ಮಂಡಲಗಳು ಅಧಿನಿಯಮಿಸಿದ ಕಾನೂನುಗಳಲ್ಲಿ ಒದಗಿಸಲಾದ ರಕ್ಷಣಾ ವ್ಯವಸ್ಥೆಗಳ ನಿರ್ವಹಣೆಯ ಮೇಲ್ವಿಚಾರಣೆ ಮಾಡುವುದು;

(ಸಿ) ಅಲ್ಪಸಂಖ್ಯಾತರ ಹಿತರಕ್ಷಣೆಯ ಸಲುವಾಗಿರುವ ರಕ್ಷಣಾ ವ್ಯವಸ್ಥೆಗಳನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದಕ್ಕೆ ಶಿಫಾರಸು ಮಾಡುವುದು;

(ಡಿ) ಅಲ್ಪಸಂಖ್ಯಾತರ ಹಕ್ಕುಗಳನ್ನು ಮತ್ತು ರಕ್ಷಣಾ ವ್ಯವಸ್ಥೆಗಳನ್ನು ತಪ್ಪಿಸಿದ ಸಂಬಂಧದ ನಿರ್ದಿಷ್ಟ ದೂರುಗಳನ್ನು ಗಮನಿಸಿ ಅಂಥ ಪ್ರಕರಣಗಳನ್ನು ಸಮುಚಿತ ಪ್ರಾಧಿಕಾರದ ಮುಂದೆ ಇಡುವುದು;

(ಇ) ಅಲ್ಪ ಸಂಖ್ಯಾತರ ವಿರುದ್ಧದ ಯಾವುದೇ ತಾರತಮ್ಯದಿಂದ ಉದ್ಭವಿಸುವ ಸಮಸ್ಯೆಗಳನ್ನು ಕುರಿತು ಅಧ್ಯಯನವನ್ನು ಕೈಗೊಳ್ಳುವಂತೆ ಮಾಡುವುದು ಮತ್ತು ಆ ಸಮಸ್ಯೆಗಳ ನಿವಾರಣೆಗಾಗಿ ಕ್ರಮಗಳನ್ನು ಶಿಫಾರಸು ಮಾಡುವುದು;

(ಎಫ್) ಅಲ್ಪ ಸಂಖ್ಯಾತರ ಸಾಮಾಜಿಕ – ಆರ್ಥಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಅಧ್ಯಯನ, ಸಂಶೋಧನೆ ಮತ್ತು ವಿಶ್ಲೇಷಣೆ ನಡೆಸುವುದು;

(ಜಿ) ಯಾವುದೇ ಅಲ್ಪ ಸಂಖ್ಯಾತರ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರಗಳು ಕೈಗೊಳ್ಳಬೇಕಾದ ಸಮುಚಿತ ಕ್ರಮಗಳನ್ನು ಸೂಚಿಸುವುದು;

(ಹೆಚ್) ಅಲ್ಪ ಸಂಖ್ಯಾತರ ಸಂಬಂಧದಲ್ಲಿ ಯಾವುದೇ ವಿಷಯದ ಬಗ್ಗೆ ಮತ್ತು ವಿಶೇಷವಾಗಿ ಅವರು ಎದುರಿಸುತ್ತಿರುವ ಸಂಕಷ್ಟಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಿಯತಕಾಲಿಕ ಅಥವಾ ವಿಶೇಷ ವರದಿಗಳನ್ನು ಸಲ್ಲಿಸುವುದು ; ಮತ್ತು

(ಐ) ಕೇಂದ್ರ ಸರ್ಕಾರವು ಅದಕ್ಕೆ ಉಲ್ಲೇಖಿಸಬಹುದಾದ ಯಾವುದೇ ಇತರ ವಿಷಯ.

(2) ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದಲ್ಲಿ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಶಿಫಾರಸುಗಳನ್ನು, ಕೇಂದ್ರಕ್ಕೆ ಸಂಬಂಧಿಸಿದ ಶಿಫಾರಸಿನ ಮೇಲೆ ತೆಗೆದುಕೊಳ್ಳಲಾದ ಕ್ರಮವನ್ನು ಅಥವಾ ತೆಗೆದುಕೊಳ್ಳಲು ಉದ್ದೇಶಿಸಲಾದ ಕ್ರಮವನ್ನು ಮತ್ತು ಅಂಥ ಯಾವುವೇ ಶಿಫಾರಸುಗಳನ್ನು ಒಪ್ಪಿಕೊಳ್ಳದೇ ಇರುವಲ್ಲಿ ಆ ಬಗ್ಗೆ ಕಾರಣಗಳನ್ನು ವಿವರಿಸುವ ಜ್ಞಾಪನ ಪತ್ರದೊಂದಿಗೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವ ವ್ಯವಸ್ಥೆ ಮಾಡತಕ್ಕದ್ದು.

(3) ಯಾವುದೇ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದಂತೆ, (1)ನೆಯ ಉಪ ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಿದ ಯಾವುವೇ ಶಿಫಾರಸು ಅಥವಾ ಯಾವುದೇ ಅದರ ಭಾಗವನ್ನು ಆಯೋಗವು ಅಂಥ ಶಿಫಾರಸಿನ ಅಥವಾ ಅದರ ಯಾವುದೇ ಭಾಗದ ಪ್ರತಿಯನ್ನು ಅಂಥ ರಾಜ್ಯ ಸರ್ಕಾರಕ್ಕೆ ಕಳಿಸಲು ವ್ಯವಸ್ಥೆ ಮಾಡತಕ್ಕದ್ದು. ಆಗ ಅಂಥ ರಾಜ್ಯ ಸರ್ಕಾರವು, ಆ ರಾಜ್ಯಕ್ಕೆ ಸಂಬಂಧಿಸಿದಂತೆ ಶಿಫಾರಸುಗಳ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವುದನ್ನು ಮತ್ತು ಒಪ್ಪಿಕೊಳ್ಳದೆ ಇರುವಲ್ಲಿ ಆ ಕುರಿತು ಕಾರಣಗಳನ್ನು ವಿವರಿಸುವ ಜ್ಞಾಪನಪತ್ರದೊಂದಿಗೆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವ ವ್ಯವಸ್ಥೆ ಮಾಡತಕ್ಕದ್ದು.

(4) ಆಯೋಗವು, (1)ನೆಯ ಉಪಪ್ರಕರಣದ (ಎ), (ಬಿ) ಮತ್ತು (ಡಿ) ಉಪಖಂಡಗಳಲ್ಲಿ ನಮೂದಿಸಲಾದ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅದರಲ್ಲೂ ವಿಶೇಷವಾಗಿ ಈ ಕೆಳಕಂಡ ವಿಷಯಗಳ ಬಗ್ಗೆ, ದಾವೆಯನ್ನು ವಿಚಾರಣೆ ನಡೆಸುವ ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಿಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಭಾರತದ ಯಾವುದೇ ಭಾಗದಲ್ಲಿರುವ ಯಾರೇ ವ್ಯಕ್ತಿಗೆ ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸಿ ಅದನ್ನು ಹಾಜರುಪಡಿಸಲು ಅಗತ್ಯಪಡಿಸುವುದು;

(ಸಿ) ಶಪಥಪತ್ರಗಳ ಮೇಲೆ ಸಾಕ್ಷ್ಯ ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಒದಗಿಸುವಂತೆ ಅಗತ್ಯಪಡಿಸುವುದು;

(ಇ) ಸಾಕ್ಷಿಗಳ ಮತ್ತು ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನುಗಳನ್ನು ಹೊರಡಿಸುವುದು;

(ಎಫ್) ನಿಯಮಿಸಬಹುದಾದ ಯಾವುದೇ ಇತರ ವಿಷಯ.

## ಅಧ್ಯಾಯ –IV

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

**10. ಕೇಂದ್ರ ಸರ್ಕಾರದಿಂದ ಅನುದಾನಗಳು.–** (1) ಕೇಂದ್ರ ಸರ್ಕಾರವು, ಈ ಬಗ್ಗೆ ಸಂಸತ್ತು ಕಾನೂನಿನ ಮೂಲಕ ಮಾಡಿದ ಯುಕ್ತ ವಿನಿಯೋಗದ ತರುವಾಯ, ಈ ಅಧಿನಿಯಮದ ಉದ್ದೇಶಗಳಿಗಾಗಿ ಉಪಯೋಗಿಸಿ ಕೊಳ್ಳುವುದಕ್ಕಾಗಿ, ಕೇಂದ್ರ ಸರ್ಕಾರವು ಯುಕ್ತವೆಂದು ಯೋಚಿಸಬಹುದಾದಷ್ಟು ಹಣದ ಮೊತ್ತಗಳನ್ನು ಅನುದಾನಗಳ ರೂಪದಲ್ಲಿ ಆಯೋಗಕ್ಕೆ ಸಂದಾಯ ಮಾಡತಕ್ಕದ್ದು.

(2) ಆಯೋಗವು, ಈ ಅಧಿನಿಯಮದ ಮೇರೆಗೆ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ತಾನು ಯುಕ್ತವೆಂದು ಯೋಚಿಸುವಷ್ಟು ಮೊತ್ತಗಳನ್ನು ಖರ್ಚು ಮಾಡಬಹುದು, ಮತ್ತು ಅಂಥ ಮೊತ್ತಗಳನ್ನು (1)ನೆಯ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅನುದಾನಗಳಿಂದ ಸಂದಾಯ ಮಾಡಲಾಗುವ ವೆಚ್ಚಗಳೆಂಬುದಾಗಿ ಭಾವಿಸತಕ್ಕದ್ದು.

**11. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ಆಯೋಗವು ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಸಂಬಂಧಪಟ್ಟ ಇತರ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕ ಪರಿಶೋಧಕರೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂತಹ ನಮೂನೆಯಲ್ಲಿ ವಾರ್ಷಿಕ ಲೆಕ್ಕಪತ್ರಗಳ ವಿವರಣೆಯನ್ನು ತಯಾರಿಸತಕ್ಕದ್ದು.

(2) ಆಯೋಗವು ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ನಿರ್ದಿಷ್ಟಪಡಿಸಬಹುದಾದ ಅವಧಿಯ ಅಂತರಗಳಲ್ಲಿ ಅವನ ಮೂಲಕ ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು ಮತ್ತು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಮಾಡಲಾದ ಯಾವುದೇ ವೆಚ್ಚವನ್ನು ಆಯೋಗವು, ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕ ಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು.

(3) ಲೆಕ್ಕ ನಿಯಂತ್ರಕ ಮತ್ತು ಮಹಾ ಲೆಕ್ಕ ಪರಿಶೋಧಕನು ಮತ್ತು ಆಯೋಗದ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಅವನು ನೇಮಿಸಿದ ಯಾರೇ ವ್ಯಕ್ತಿಯು ಸರ್ಕಾರದ ಲೆಕ್ಕ ಪತ್ರಗಳ ಪರಿಶೋಧನೆಗೆ ಸಂಬಂಧಿಸಿ, ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಸಾಮಾನ್ಯವಾಗಿ ಲೆಕ್ಕ ಪರಿಶೋಧನೆ ಮಾಡುವ ಸಂಬಂಧದಲ್ಲಿ ಹೊಂದಿರತಕ್ಕ ಹಕ್ಕುಗಳನ್ನು ಮತ್ತು ವಿಶೇಷ ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ ಪುಸ್ತಕಗಳನ್ನು, ಲೆಕ್ಕ ಪತ್ರಗಳನ್ನು, ಸಂಬಂಧಪಟ್ಟ ವೋಚರುಗಳನ್ನು ಹಾಗೂ ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಕೇಳಲು ಮತ್ತು ಆಯೋಗದ ಯಾವುದೇ ಕಛೇರಿಯನ್ನು ಪರಿಶೀಲಿಸುವ ಹಕ್ಕು ಹೊಂದಿರತಕ್ಕದ್ದು.

**12. ವಾರ್ಷಿಕ ವರದಿ.–** ಆಯೋಗವು, ಪ್ರತಿಯೊಂದು ಹಣಕಾಸಿನ ವರ್ಷಕ್ಕಾಗಿ ನಿಯಮಿಸ ಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಸಮಯದಲ್ಲಿ, ಹಿಂದಿನ ಹಣಕಾಸು ವರ್ಷದ ಕಾರ್ಯ ಚಟುವಟಿಕೆಗಳ ಪೂರ್ಣ ವಿವರವನ್ನು ನೀಡುವ ತನ್ನ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**13. ವಾರ್ಷಿಕ ವರದಿಯನ್ನು ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.–** (1) ಕೇಂದ್ರ ಸರ್ಕಾರವು, ವಾರ್ಷಿಕ ವರದಿಯನ್ನು ಮತ್ತು ಅದರಲ್ಲಿ ಒಳಗೊಂಡಿರುವ ಶಿಫಾರಸ್ಸುಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ ಅವುಗಳ ಮೇಲೆ ಕೈಗೊಂಡ ಕ್ರಮದ ಜ್ಞಾಪನ ಪತ್ರವನ್ನು ಮತ್ತು ಅಂತಹ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳದಿರುವ ಬಗ್ಗೆ ಇರುವಂತಹ ಯಾವುವೇ ಕಾರಣಗಳಿದ್ದರೆ

ಅವನ್ನು ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು, ಆ ವರದಿಗಳನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವ ವ್ಯವಸ್ಥೆ ಮಾಡತಕ್ಕದ್ದು.

## ಅಧ್ಯಾಯ –V
## ಸಂಕೀರ್ಣ

**14. ಆಯೋಗದ ಅಧ್ಯಕ್ಷರು, ಸದಸ್ಯರು ಮತ್ತು ಸಿಬ್ಬಂದಿ ವರ್ಗವು ಲೋಕ ನೌಕರರಾಗಿರುವುದು.–** ಆಯೋಗದ ಅಧ್ಯಕ್ಷನನ್ನು, ಸದಸ್ಯನನ್ನು ಮತ್ತು ನೌಕರರನ್ನು, ಭಾರತ ದಂಡ ಸಂಹಿತೆ, 1860 (1860ರ 45)ರ 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

**15. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಇಂತಹ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು:–

(ಎ) 4ನೇ ಪ್ರಕರಣದ (5)ನೇ ಉಪ ಪ್ರಕರಣದ ಮೇರೆಗೆ ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಮತ್ತು 5ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡತಕ್ಕ ವೇತನ ಮತ್ತು ಭತ್ಯೆಗಳು ಹಾಗೂ ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) 9ನೇ ಪ್ರಕರಣದ (4)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗಿನ ಯಾವುದೇ ಇತರ ವಿಷಯ;

(ಸಿ) 11ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ಇಡಬೇಕಾದ ನಮೂನೆ;

(ಡಿ) 12ನೇ ಪ್ರಕರಣದ ಮೇರೆಗೆ ವಾರ್ಷಿಕ ವರದಿಯನ್ನು ಯಾವ ನಮೂನೆ ಮತ್ತು ಯಾವ ಸಮಯದಲ್ಲಿ ಸಿದ್ಧಪಡಿಸಬೇಕು ಎಂಬ ವಿಷಯ;

(ಇ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತು ಅಧಿವೇಶನದಲ್ಲಿರುವಾಗ, ಅದರ ಎರಡೂ ಸದನಗಳ ಮುಂದೆ ಒಂದೇ ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನದಲ್ಲಿ ಒಳಗೊಳ್ಳಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕ ಉಂಟು ಮಾಡತಕ್ಕದ್ದಲ್ಲ.

**16. ತೊಂದರೆಗಳ ನಿವಾರಣೆಯ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಉದ್ಭವಿಸುವ ಯಾವುದೇ ತೊಂದರೆಯನ್ನು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು

ಪ್ರಕಟಿಸುವ ಮೂಲಕ, ಆ ತೊಂದರೆಗಳ ನಿವಾರಣೆಗಾಗಿ ಅಗತ್ಯ ಕಂಡಂತೆ ಅಥವಾ ವಿಹಿತವೆನ್ನುವಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ಅಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಲಾಗುವ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

*  *  *